ಮಂಗಳೂರು ಬಂದರಿನ ನಿರ್ವಸತಿಕರಿಗೆ ನಿವೇಶನ

255 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರು ಬಂದರು ನಿರ್ವಸತಿಕರುಗಳಿಗೆ ವಾಸಕ್ಕೆ ಕೊಡಲಾದ ಕಾಟಿಪಾಳ್ಯ - ಕೃಷ್ಣಾಪುರ ಭಾಗದಲ್ಲಿ ಎಷ್ಟು ನಿವೇಶನಗಳನ್ನು ವಿತರಣೆ ಮಾಡಲಾಗಿದೆ, ಯಾವ ಯಾವ ವರ್ಷಗಳಲ್ಲಿ ನಿರ್ವಸತಿಕರಿಗೆ ಈ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ?

ಆ) ಇವುಗಳಲ್ಲಿ ಎಷ್ಟು ಸೈಟ್‌ಗಳಿಗೆ ಹಕ್ಕು ಪತ್ರವನ್ನು ನೀಡಲಾಗಿದೆ ಮತ್ತು ಹಕ್ಕು ಪತ್ರಗಳನ್ನು ಕೊಡದೆ ಉಳಿದಿರುವ ನಿವೇಶನಗಳ ಸಂಖ್ಯೆ ಎಷ್ಟು?

ಇ) ಹೀಗೆ ವಿತರಿಸಿದ ನಿವೇಶನಗಳಲ್ಲಿ ಮೂಲ ಹಕ್ಕು ಪತ್ರದಾರರು ಮಾರಾಟ ಮಾಡಿದ ನಿವೇಶನಗಳೆಷ್ಟು; ಮನೆ ಕಟ್ಟಿಕೊಳ್ಳದೇ ಖಾಲಿ ಇರುವ ನಿವೇಶನಗಳ ಸಂಖ್ಯೆ ಎಷ್ಟು?

ಈ) ಹಕ್ಕು ಪತ್ರಗಳನ್ನು ನೀಡದಿರುವ ಅರ್ಹರಿಗೆ ಯಾವಾಗ ಹಕ್ಕು ಪತ್ರಗಳನ್ನು ನೀಡಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು) :

ಅ) ನವಮಂಗಳೂರು ಬಂದರು ನಿರ್ವಸತಿಕರಿಗೆ ಕಾಟಿಪಾಳ್ಯ, ಕೃಷ್ಣಾಪುರ ಭಾಗದಲ್ಲಿ 9 ಬ್ಲಾಕುಗಳಲ್ಲಿ ಒಟ್ಟು 2725 ನಿರ್ವಸತಿಗರಿಗೆ ನಿವೇಶನಗಳನ್ನು ಮಂಜೂರು ಮಾಡಲಾಗಿದೆ. ಈ ನಿವೇಶನಗಳನ್ನು 1964, 1967, 1968 ಮತ್ತು 1969ರಲ್ಲೂ ನೀಡಲಾಗಿದೆ.

ಆ) 1964ರಲ್ಲಿ ನಿವೇಶನ ಮಂಜೂರು ಮಾಡುವ ಸಮಯದಲ್ಲಿ ಹಕ್ಕು ಪತ್ರ ಕೊಡುವ ಕ್ರಮ ಜಾರಿಯಲ್ಲಿರಲಿಲ್ಲ. ಬ್ಲಾಕ್ 1,2, 5, 6, 7, 8, 8ಎ ಮತ್ತು 9ರ ಬ್ಲಾಕ್‌ನಲ್ಲಿ ಸರ್ವೇಕ್ಷಣೆ ಮಾಡಿ 613 ಜನ ಮೂಲ ಮಂಜೂರಾತಿದಾರರಿಗೆ ಹಕ್ಕು ಪತ್ರಗಳನ್ನು ಮಂಗಳೂರು ಸಹಾಯಕ ಕಮೀಷನರ್‌ರ ಕಛೇರಿಯಿಂದ 1994ರಲ್ಲಿ ನೀಡಲಾಗಿದೆ. ಬ್ಲಾಕ್ 3 ಮತ್ತು 4ರಲ್ಲಿ ಕೆಲವೊಂದು ಮಂಜೂರಾತಿ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ಹಕ್ಕು ಪತ್ರ ನೀಡಲು ಬಾಕಿ ಇದೆ.

ಇ) ನಿವೇಶನ ಮಂಜೂರಾದ ನಿವೇಶನದಾರರಲ್ಲಿ ಕೆಲವರು ನಿವೇಶನಗಳನ್ನು ಪರಾಬಾರೆ ಮಾಡಿರುತ್ತಾರೆ. 15 ವರ್ಷ ಅವಧಿ ಪೂರೈಸಿದ ನಂತರ ಮಾರಾಟ ಮಾಡಿದ ಪ್ರಕರಣಗಳಾಗಿರುತ್ತವೆ. ಅಲ್ಲದೆ ನಿವೇಶನ ಮಂಜೂರು ಮಾಡಿರುವುದು ಅವರು ಜಮೀನು ಕಳೆದುಕೊಂಡು ನಿರಾಶ್ರಿತರಾದವರಿಗೆ ಆಗಿದ್ದು, ಈ ನಿವೇಶನಗಳನ್ನು ಮಾರಾಟ ಮಾಡಲು ನಿವೇಶನದಾರದು ಸ್ವತಂತ್ರರಾಗಿರುತ್ತಾರೆ. ಮನೆ ಕಟ್ಟದೆ ಖಾಲಿ ಇರುವ ನಿವೇಶನಗಳು ಇರುವುದಿಲ್ಲ.

ಈ) 1964ರಲ್ಲಿಯೇ ಎಲ್ಲಾ2725 ನಿರಾಶ್ರಿತ ಜನರಿಗೆ ನಿವೇಶನ ಮಂಜೂರು ಮಾಡಲಾಗಿದೆ. ಈ ಪೈಕಿ 1150 ಜನರಿಗೆ ಪಹಣಿ ಪತ್ರಿಕೆ ನೀಡಲಾಗಿದೆ. ಪ್ರಕೃತ 613 ಜನ ನಿವೇಶನ ಮಂಜೂರು

-ದಾರರಿಗೆ ಸರ್ವೇಕ್ಷಣೆಯಿಂದ ಹೊಸ ಹಕ್ಕು ಪತ್ರ ನೀಡಲಾಗಿದೆ. ಈಗ ಹಕ್ಕು ಪತ್ರ ನೀಡಲು ನಿರ್ವಸಿತರಿಂದ ಬಂದಿರುವ ಅರ್ಜಿಗಳು ಬಾಕಿ ಇರುವುದಿಲ್ಲ.

ಶ್ರೀ ಕುಂಬ್ಳೆ ಸುಂದರರಾವ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ನವ ಬಂದರು ನಿರ್ವಸತಿಕರಿಗೆ ಕಾಟಿಪೆಳ್ಳೆ ಬ್ಲಾಕ್‌ನಲ್ಲಿ 2725 ನಿವೇಶನಗಳನ್ನು ಮಂಜೂರು ಮಾಡಲಾಗಿದೆಯೆಂದು ಹೇಳಿದ್ದಾರೆ. ಇದನ್ನು ಬೇರೆ ಬೇರೆ ಹಂತದಲ್ಲಿ ಮಾಡಿದ್ದಾರೆ. ಈ ನಿವೇಶನಗಳನ್ನು ಮಂಜೂರು ಮಾಡಿದ ಮೇಲೆ ಆ ನಿವೇಶನಕ್ಕೆ ಸಂಬಂಧಪಟ್ಟ ಹಕ್ಕುಪತ್ರಗಳನ್ನು ಕೊಡುವುದು ಬಹಳ ತಡವಾಗಿದೆ. ಆಗ ಕಾಯಿದೆ ಇರಲಿಲ್ಲವೆಂದು ಹೇಳುತ್ತಾರೆ. ಕಾಯಿದೆ ಬಂದಮೇಲೆ ಎಲ್ಲರಿಗೂ ಹಕ್ಕುಪತ್ರಗಳನ್ನು ಕೊಡಬೇಕಾಗಿತ್ತು. ಅವರಿಗೆ ಹಕ್ಕುಪತ್ರಗಳನ್ನು ಕೊಟ್ಟರೆ ಅವರು ಮಾರಾಟ ಮಾಡುವುದು ಅಥವಾ ಭೋಗ್ಯ ಹಾಕಲಿಕ್ಕೆ ಅನುಕೂಲವಾಗುವ ವ್ಯವಸ್ಥೆ ಮಾಡಬೇಕಾಗಿದೆ. ಅದು ಇನ್ನೂ ಮಾಡಲಿಲ್ಲ. ಆ ಕೆಲಸ ಉಳಿದಿದೆಯೆಂದು ನೀವೇ ಒಪ್ಪಿಕೊಂಡಿದ್ದೀರಿ, ಯಾವಾಗ ಅದನ್ನು ಪೂರೈಸುತ್ತೀರಿ? ಈ ಪ್ರಶ್ನೆಯ ಜೊತೆಯಲ್ಲಿ ಇನ್ನೊಂದು ಪ್ರಶ್ನೆ, ಅದೇನೆಂದರೆ ಬಂದರು ನಿರ್ಮಾಣಕ್ಕಾಗಿ ಜಮೀನು ಯಾರು ಕೊಟ್ಟಿದ್ದಾರೆ ಅವರಿಗೆ ವಾಸ ಮಾಡುವಂತಹ ಜಾಗದಲ್ಲಿ ರಸ್ತೆ ಮಾಡಿಕೊಟ್ಟಿಲ್ಲ, ದೀಪದ ವ್ಯವಸ್ಥೆಯಿಲ್ಲ, ನೀರಿನ ವ್ಯವಸ್ಥೆಯಿಲ್ಲ. ಇಷ್ಟು ವರ್ಷಗಳಾದರೂ ಅವರಿಗೆ ನೀವು ಯಾವ ವ್ಯವಸ್ಥೆಯನ್ನು ಮಾಡಲಿಲ್ಲ. ಅವರು ಗೋಳಾಡುತ್ತಿದ್ದಾರೆ. ಈ ಬಗ್ಗೆ ಸರ್ಕಾರ ಗಮನಹರಿಸುತ್ತದೆಯೇ?

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದುವರೆಗೆ ಹಕ್ಕುಪತ್ರಗಳನ್ನು ಕೊಟ್ಟಿಲ್ಲವೆಂದರೆ ಹಕ್ಕುಪತ್ರಗಳನ್ನು ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಅದು ಅಲ್ಲದೆ ರಸ್ತೆ, ದೀಪ, ನೀರಿನ ವ್ಯವಸ್ಥೆ ಮಾಡುವುದಕ್ಕೆ ನಾವು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ನಿವೇಶನ ಮಾಡುವ ಹಂತದಲ್ಲಿಯೇ ಮೇಲಿನ ಎಲ್ಲಾ ವ್ಯವಸ್ಥೆ ಮಾಡಲಿಕ್ಕೆ ತಿಳಿಸಲಾಗಿದೆ. ನಿವೇಶನ ಮಾಡುವ ಸಂದರ್ಭದಲ್ಲಿ ಈ ಎಲ್ಲಾ ಅನುಕೂಲಗಳನ್ನು ಮಾಡಲಿಕ್ಕೆ ಏನಾದರೂ ಹಣದ ಕೊರತೆಯಿದ್ದರೆ ಹೆಚ್ಚಿಗೆ ಹಣ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ.

ರೈತ ಕುಟುಂಬಕ್ಕೆ ಸಹಕಾರ ಸಂಘ ಸಂಸ್ಥೆಗಳಿಂದ ಸಾಲ ಸೌಲಭ್ಯಗಳು

259 - ಶ್ರೀ ಡಿ.ಆರ್. ಪಾಟೀಲ್ (ಗದಗ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1994-95 ರಿಂದ 98ರ ಮಾರ್ಚ್‌ವರೆಗೆ ರಾಜ್ಯದ ಎಷ್ಟು ಕೃಷಿ ಕುಟುಂಬಗಳಿಗೆ ಸಹಕಾರ ಸಂಘ ಸಂಸ್ಥೆಗಳಿಂದ ಸಾಲ ಸೌಲಭ್ಯ ದೊರತಿದೆ. ಹಾಗೂ ವಿತರಣೆಯಾದ ಸಾಲ ಸೌಲಭ್ಯದ ಮೊತ್ತ ಎಷ್ಟು? (ವರ್ಷಾವಾರು ವಿವರ ನೀಡುವುದು)*

ಆ) *ರಾಜ್ಯದಲ್ಲಿರುವ ಒಟ್ಟು ಕೃಷಿ ಕುಟುಂಬಗಳಲ್ಲಿ ಸಾಲ ಸೌಲಭ್ಯ ಪಡೆದ ಕೃಷಿ ಕುಟುಂಬಗಳ ಪ್ರಮಾಣ ಎಷ್ಟು? ಇದರಲ್ಲಿ ಸಣ್ಣ ಮಧ್ಯಮ ಹಾಗೂ ದೊಡ್ಡ ರೈತರಲ್ಲಿ ಸಾಲ ಸೌಲಭ್ಯ ಪಡೆದವರ ಪ್ರಮಾಣ ಎಷ್ಟು? ಕಳೆದ 3 ವರ್ಷದ ವರ್ಷಾವಾರು ವಿವರ ನೀಡಿರಿ.*